## ದಿನಾಂಕ: 11-07-2024ರಂದು ನಡೆದ 47ನೆಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 47ನೆಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:11.07.2024 ರಂದು ಬುಧವಾರ ಬೆಳಗ್ಗೆ 10.30ಕ್ಕೆ ನಡೆಯಿತು.

**ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. **ಡಾ. ಎಸ್ ಅಹಲ್ಯ,** ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. **ಶ್ರೀಮತಿ ಉಮಾ ಕೆ,** ಜಂಟೀ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
3. **ಪ್ರೊ. ವಿ ಗಿರೀಶ್‌ಚಂದ್ರ,** ಕುಲಸಚಿವರು, ಕಸಂವಿ — ಸದಸ್ಯರು
4. **ಶ್ರೀ. ಕುಮಾರ ಎನ್,** ಉಪ ಕಾರ್ಯದರ್ಶಿ, (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. **ಪ್ರೊ. ವಿ ಗಿರೀಶ್‌ಚಂದ್ರ,** ಡೀನ್, ಕಸಂವಿ — ಸದಸ್ಯರು
6. **ಡಾ. ಭರತ್ ಕೆ.ಎ,** ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 46ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 06.03.2024ರ ನಡಾವಳಿಯನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸಭೆಯು ಸ್ಥಿರೀಕರಿಸಿತು. |
| ವಿಷಯ 2 | 46ನೇ ಸಭೆಯ ನಡಾವಳಿಯಂತೆ ಕ್ರಮವಹಿಸಲಾಗಿರುವ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 06.03.2024ರ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸಭೆಯು ಅನುಮೋದಿಸಿತು. |

| | |
|---|---|
| ವಿಷಯ 3 | **ಜನವರಿ 2024 ರಿಂದ ಮಾರ್ಚ್ 2024 ರವರಿಗಿನ ಮೂರು ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಜನವರಿ 2024 ರಿಂದ ಮಾರ್ಚ್ 2024 ರವರಿಗಿನ (03) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |
| ವಿಷಯ 4 | **2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಹಣಕಾಸಿನ ವ್ಯವಹಾರಗಳನ್ನು M/S. D.N Joshi & Co. ರವರು ನಿರ್ವಹಿಸುತ್ತಿದ್ದಾರೆ. ಸದರಿಯವರು 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ, ಸಲ್ಲಿಸಿರುವ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಮಂಡಿಸಿದೆ |
| ನಿರ್ಣಯ | **ಸಭೆಯು ಅನುಮೋದಿಸಿತು.** |
| ವಿಷಯ 5 | **ಎಪ್ರಿಲ್-2024 ರಿಂದ ಮೇ-2024 ರವರಿಗಿನ ಎರಡು ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಎಪ್ರಿಲ್-2024 ರಿಂದ ಮೇ-2024 ರವರಿಗಿನ (02) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು..** |
| ವಿಷಯ 6 | **2024-25ನೇ ಸಾಲಿನ ಕ್ರಿಯಾ ಯೋಜನೆಯನ್ನು (ಬಜೆಟ್) ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | 2024-25ನೇ ಸಾಲಿನ ಕ್ರಿಯಾ ಯೋಜನೆಯನ್ನು (ಬಜೆಟ್) ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |
| ವಿಷಯ 7 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕೆಲವು ಅಧಿಕಾರಿಗಳು ನಿಯೋಜನೆಗೊಂಡಿದ್ದರಿಂದ ಹಾಗೂ ಪದೋನ್ನತಿ ಪಡಿದಿದ್ದರಿಂದ ಖಾಲಿ ಇರುವ ಹುದ್ದೆಗಳಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಿಬ್ಬಂದಿಗಳನ್ನು ಅಧಿಕ ಪ್ರಭಾರದಲ್ಲಿರಿಸಿರುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕೆಲವು ಅಧಿಕಾರಿಗಳು ನಿಯೋಜನೆಗೊಂಡಿದ್ದರಿಂದ ಹಾಗೂ ಪದೋನ್ನತಿ ಪಡಿದಿದ್ದರಿಂದ ಖಾಲಿ ಇರುವ ಹುದ್ದೆಗಳಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಿಬ್ಬಂದಿಗಳನ್ನು ಅಧಿಕ ಪ್ರಭಾರದಲ್ಲಿರಿಸಿರುವುದಕ್ಕೆ ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಪರಿಶೀಲಿಸಿ ಮತ್ತೊಮ್ಮೆ ಕೆ ಸಿ ಎಸ್ ಆರ್ ನಿಯಮಾನುಸಾರ ಖಚಿತ ಪಡಿಸಿಕೊಳ್ಳಲು ಸೂಚಿಸಿತು.** |
| ವಿಷಯ 8 | **UGC ವೇತನ ಶ್ರೇಣಿಯ ಸಹಾಯಕ ಪ್ರಾಧ್ಯಾಪಕರಿಗೆ CAS ನೀಡುವ ಬಗ್ಗೆ.** |

| | |
|---|---|
| ಟಿಪ್ಪಣಿ | UGC ವೇತನ ಶ್ರೇಣಿಯ ಇಬ್ಬರು ಸಹಾಯಕ ಪ್ರಾಧ್ಯಾಪಕರಿಗೆ CAS ನೀಡುವ ಸಂಬಂಧ ಸಮಿತಿಯಿಂದ ಶಿಫಾರಸ್ಸು ವರದಿ ಪಡೆಯಲಾಗಿದ್ದು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಿಂಡಿಕೇಟ್ ಅನುಮೋದನೆ ಪಡೆದು ಅಂದಿನಿಂದ ಜಾರಿಗೆ ಬರುವಂತೆ ಆದೇಶ ನೀಡಲು ಸೂಚಿಸಿತು.** |
| ವಿಷಯ 9 | **ವಾಕ್ಯಾರ್ಥ ಸಭೆಯ ಅಧ್ಯಕ್ಷರಿಗೆ ಮತ್ತು ಪ್ರಸ್ತೋತೃಗಳಿಗೆ ಗೌರವ ಧನವನ್ನು ನಿಗದಿ ಪಡಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಾರಂಪರಿಕವಾದ ವಾಕ್ಯರ್ಥಗಳು ಶಾಸ್ತ್ರೀಯವಾದ ರೀತಿಯಲ್ಲಿ ದೇಶದ ಹಿರಿಯ ವಿದ್ವಾಂಸರಿಂದ ಆಯೋಜಿಸಲು ತೀರ್ಮಾನಿಸಲಾಗಿದ್ದು ಇದಕ್ಕೆ ಆಗಮಿಸುವ ಅಧ್ಯಕ್ಷರಿಗೆ 7,000/ ರೂಗಳನ್ನು ಹಾಗೂ ಪ್ರಸ್ತೋತೃಗಳಿಗೆ 5,000/- ಸಾವಿರಗಳನ್ನು ಗೌರವ ಧನವನ್ನು ನಿಗಧಿ ಪಡಿಸಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |
| ವಿಷಯ 10 | **Ph.D ವಿದ್ಯಾವಾರಿಧಿ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ.** |
| ಟಿಪ್ಪಣಿ | Ph.D ವಿದ್ಯಾವಾರಿಧಿ ಪದವಿಯ ಶುಲ್ಕಗಳನ್ನು ಕಳೆದ ಮೂರು ವರ್ಷಗಳಿಂದ ಪರಿಷ್ಕರಿಸಿರುವುದಿಲ್ಲ. ಪ್ರಸ್ತುತ ಅಧ್ಯಯನಾಂಗದಿಂದ ನಿಯಮಿತವಾದ ಸಮಿತಿಯು ಶುಲ್ಕಗಳನ್ನು ಪರಿಷ್ಕರಿಸಿ ವರದಿ ನೀಡಿದೆ. ಅದರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |

| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು** |
|---|---|
| ವಿಷಯ 01 | **ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಸಂಸ್ಕೃತೋತ್ಸವನ್ನು ಆಯೋಜಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದವತಿಯಿಂದ 2024-25ನೇ ಸಾಲಿಗೆ "ಸಂಸ್ಕೃತೋತ್ಸವನ್ನು" ರಾಜ್ಯದ 30 ಜಿಲ್ಲೆಗಳಲ್ಲಿ 1 ಜಿಲ್ಲೆಗೆ 10 ಕಾರ್ಯಕ್ರಮಗಳಂತೆ 30 ಜಿಲ್ಲೆಗಳಿಗೆ 300 ಕಾರ್ಯಕ್ರಮಗಳನ್ನು ಆಯೋಜಿಸಲು ಹಾಗೂ 01 ಕಾರ್ಯಕ್ರಮಕ್ಕೆ ತಗುಲುವ ವೆಚ್ಚ 3000/- ರೂಗಳಂತೆ 9 ಲಕ್ಷ ರೂಗಳ ಬಜೆಟ್ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಕ್ರಿಯಾಯೋಜನೆಯಲ್ಲಿ ಸಂಸ್ಕೃತದ ಬಗ್ಗೆ ಮಾಹಿತಿ/ಅರಿವು ಮತ್ತು ಶಿಕ್ಷಣಕ್ಕಾಗಿ ಕಾದಿರಿಸಿರುವ 10 ಲಕ್ಷ ಅನುದಾನದಲ್ಲಿ ಈ ವೆಚ್ಚವನ್ನು ಭರಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 02 | ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ (National Women's Science Congress) ಆಯೋಜಿಸುವ ಬಗ್ಗೆ. |
| ಟಿಪ್ಪಣಿ | 2024-25ನೇ ಸಾಲಿಗೆ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನವನ್ನು ಆಯೋಜಿಸಲಾಗಿದ್ದು ಇದಕ್ಕೆ ಅಂದಾಜು 3 ರಿಂದ 4 ಲಕ್ಷ ವೆಚ್ಚವಾಗಲಿದ್ದು ಇದರ ಬಜೆಟ್ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಕ್ರಿಯಾ ಯೋಜನೆಯಲ್ಲಿ ಸಂಧ್ಯಾ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿರುವ 12ಲಕ್ಷದಲ್ಲಿ 4ಲಕ್ಷ ಭರಿಸಲು ಸಭೆಯು ಅನುಮೋದನೆ ನೀಡಿತು. |
| ವಿಷಯ 03 | ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ (**Faculty Development Programme for Teacher.**) |
| ಟಿಪ್ಪಣಿ | 2024-25ನೇ ಸಾಲಿಗೆ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ (Faculty Development Programme for Teacher.) ಆಯೋಜಿಸಲಾಗಿದ್ದು ಇದಕ್ಕೆ ಅಂದಾಜು 3 ರಿಂದ 4ಲಕ್ಷ ವೆಚ್ಚವಾಗಲಿದ್ದು ಇದರ ಬಜೆಟ್ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |

| | |
|---|---|
| ನಿರ್ಣಯ | ಕ್ರಿಯಾ ಯೋಜನೆಯಲ್ಲಿ ಸಂಧ್ಯಾ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿರುವ 12ಲಕ್ಷದಲ್ಲಿ ಉಳಿದ 8ಲಕ್ಷಗಳಲ್ಲಿ 4ಲಕ್ಷಗಳನ್ನು ಭರಿಸಲು ಸಭೆಯು ಅನುಮೋದನೆ ನೀಡಿತು. |
| **ವಿಷಯ 04** | **ಗ್ರಂಥಮಾಲೆ ಕಾರ್ಯಕ್ರಮವನ್ನು ಅಯೋಜಿಸುವ ಬಗ್ಗೆ.** |
| **ಟಿಪ್ಪಣಿ** | ಹಿರಿಯ ವಿದ್ವಾಂಸರುಗಳನ್ನು ಆಹ್ವಾನಿಸಿ ಗ್ರಂಥಮಾಲೆ ಕಾರ್ಯಕ್ರಮವನ್ನು ಅಯೋಜಿಸಲು ಅಂದಾಜು 05 ಲಕ್ಷ ರೂಗಳ ಬಜೆಟ್ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಕ್ರಿಯಾಯೋಜನೆಯಲ್ಲಿ ಗ್ರಂಥಾಲಯ ಮತ್ತು ಪುಸ್ತಕ ಖರೀದಿಗಾಗಿ ಕಾದಿರಿಸಿರುವ 20 ಲಕ್ಷದಲ್ಲಿ ಉಳಿದಿರುವ 16 ಲಕ್ಷದಲ್ಲಿ ಈ ಕಾರ್ಯಕ್ರಮಕ್ಕೆ ರೂ.4 ಲಕ್ಷ ಭರಿಸಲು ಸಭೆಯು ಅನುಮೋದನೆ ನೀಡಿತು** |
| **ವಿಷಯ 05** | **ಕಾವ್ಯ ರಚನೆ ಕಾರ್ಯಕ್ರಮದ ಬಗ್ಗೆ.** |
| **ಟಿಪ್ಪಣಿ** | ಸಂಸ್ಕೃತ ಪ್ರಚಾರದ ದೃಷ್ಟಿಯಿಂದ ವಿದ್ಯಾರ್ಥಿಗಳಿಂದ ಕಾವ್ಯ ರಚನೆ ಕಾರ್ಯಕ್ರಮಗಳನ್ನು ಅಯೋಜಿಸಲು ಅಂದಾಜು 03 ಲಕ್ಷರೂಗಳ ಬಜೆಟ್ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಕ್ರಿಯಾಯೋಜನೆಯಲ್ಲಿ ಗ್ರಂಥಾಲಯ ಮತ್ತು ಪುಸ್ತಕ ಖರೀದಿಗಾಗಿ ಕಾದಿರಿಸಿರುವ 20 ಲಕ್ಷದಲ್ಲಿ ಉಳಿದಿರುವ 12 ಲಕ್ಷದಲ್ಲಿ ಈ ಕಾರ್ಯಕ್ರಮಕ್ಕೆ ರೂ. 3 ಲಕ್ಷ ಭರಿಸಲು ಸಭೆಯು ಅನುಮೋದನೆ ನೀಡಿತು** |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

**(ಡಾ. ಭರತ್ ಕೆ.ಎ)**
**ಹಣಕಾಸು ಅಧಿಕಾರಿಗಳು**
ಸದಸ್ಯ ಕಾರ್ಯದರ್ಶಿ

**(ಡಾ. ಎಸ್. ಅಹಲ್ಯ)**
**ಕುಲಪತಿಗಳು**
ಅಧ್ಯಕ್ಷರು

**ದಿನಾಂಕ: 11.07.2024**